ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸಾಲಕ್ಕಾಗಿ ಕೊಟ್ಟಿರುವ ಹಣ ಸಾಲದು, ಜಾಸ್ತಿ ಕೊಡಬೇಕು ಎಂದು ಜಿಲ್ಲಾಧಿಕಾರಿಗಳಿಂದ ವರದಿ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಲೆಕ್ಕದ ಪ್ರಕಾರ ಇನ್ನೂ 7 ಸಾವಿರ ರೂಪಾಯಿಗಳು ಅವರ ಹತ್ತಿರ ಬಿದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮೊನ್ನೆತಾನೆ ಒಂದು ವಾರದ ಹಿಂದೆ ವರದಿ ಬಂದಿತ್ತೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ ಖರ್ಚಾಗಿರುವ ಹಣವೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಲೇಜೆಸ್ಟ್ ಇನ್‌ಫರ್ಮೇಷನ್ ಸಿಕ್ಕುವುದಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಗೊತ್ತಿರುವಂತೆ ಆಗಿರುವ ಖರ್ಚೆಷ್ಟು; ಉಳಿದಿರುವುದೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಇನ್‌ಫರ್ಮೇಷನ್ ಇಲ್ಲ.

ಶ್ರೀ ಬಿ. ಮಾಧವ ಚಾರ್.—ಶಿವಮೊಗ್ಗ ಜಿಲ್ಲೆಯ ನಾಲ್ಕು ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿಯಿದ್ದರೂ ಗ್ರ್ಯಾಂಟು ಕಡಮೆ ಕೊಟ್ಟಿರುವುದಕ್ಕೆ ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—ಅಲ್ಲಿನ ಸ್ಥಿತಿಗತಿಗಳ ಆಧಾರದ ಮೇಲೆ ಮತ್ತು ಹಣದ ಆಧಾರದ ಮೇಲೆ ಅದು ನಿರ್ಧರಿಸಲ್ಪಡುತ್ತದೆ.

ಶ್ರೀ ಬಿ. ವೈ. ನೀಲೇಗೌಡ.—ಮಂಡ್ಯ ಜಿಲ್ಲೆಗೆಷ್ಟು ಕೊಟ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

Q.—403. **Sri. M. RAJASEKHARA MURTHY** (Yelandur).—

Will the Government be pleased to state:—

(*a*) whether they are contemplating a plan or scheme for the improvement of irrigation in Yelandur Taluk.

(*b*) if the scheme or plan is prepared what is its estimated cost ?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) A triennial programme for effecting improvements to Irrigation Works at a cost of Rs. 3,61,140 is got up.

ಶ್ರೀ ಎಂ. ರಾಜಶೇಖರ ಮೂರ್ತಿ.—ಎಸ್ಟಿಮೇಟ್ ತಯಾರಾಗಿ ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಹೋದ ವರ್ಷ.

ಶ್ರೀ ಎಂ. ರಾಜಶೇಖರ ಮೂರ್ತಿ.—ಎಸ್ಟಿಮೇಟ್ ಸ್ಯಾಂಕ್ಷನ್ ಆಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ರೆವೆನ್ಯೂ ಇಲಾಖೆಗೆ ಕಳಿಸಿದೆ, ಜಹಗೀರಿ ಆಡಳಿತವಿರುವುದರಿಂದ ಕಳಿಸಿದೆ. ಸರ್ಕಾರದ ಪರ್ಯಾಲೋಚನೆಯಲ್ಲಿದೆ. 1½ ಲಕ್ಷ ರೂಪಾಯಿಗಳನ್ನು ಕೆರೆ ಜೀರ್ಣೋದ್ಧಾರಕ್ಕಾಗಿ ಹೋದ ತಿಂಗಳು ಕೊಟ್ಟಿದೆ.

ಶ್ರೀ ಎಂ. ರಾಜಶೇಖರ ಮೂರ್ತಿ.—ಸರ್ಕಾರದ ಫಂಡಿನಿಂದಲೋ ಅಥವಾ ಜಹಗೀರಿ ಫಂಡಿನಿಂದಲೋ ?

ಶ್ರೀ ಕಡಿದಾಳ್ ಮಂಜಪ್ಪ.—ಜಹಗೀರಿ ಫಂಡಿನಿಂದ.

ಶ್ರೀ ಎಂ. ರಾಜಶೇಖರ ಮೂರ್ತಿ.—ಹಾಗಾದರೆ ಜಹಗೀರಿ ಫಂಡು ಎಷ್ಟಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಎಂ. ರಾಜಶೇಖರ ಮೂರ್ತಿ.—ಜಹಗೀರಿ ಫಂಡಿನಿಂದ ಜಹಗೀರುದಾರರು ಹಣ ಡ್ರಾ ಮಾಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಡ್ರಾ ಮಾಡಿರಬೇಕು.

ಶ್ರೀ ಎಂ. ರಾಜಶೇಖರ ಮೂರ್ತಿ.—ಹಾಗಾದರೆ ಈಗ ತಯಾರಿಸಿರುವ ಸ್ಕೀಂ ಜಾರಿಗೆ ಕೊಡಲು ಎಷ್ಟು ವರ್ಷ ಬೇಕು ?

ಶ್ರೀ ಕಡಿದಾಳ್ ಮಂಜಪ್ಪ.—ಕೆಲವು ಭಾಗ ಜಾರಿಗೆ ಕೊಟ್ಟಿದೆ, ಕೆಲವು ಕೆಲಸಗಳು ಆಗುತ್ತಿವೆ.

Landless Depressed Class people in Madhugiri and Pavagada Taluks.

Q.—469. **Sri C. T. HANUMANTHAIYA** (Pavagada—Scheduled Castes).—

Will the Government be pleased to state:—

the number of landless persons belonging to the Depressed Class in the villages of the three hoblis of Midigesi, Itagadibbanahalli, Kodigenahalli of Madhugiri and Pavagada taluks (hobliwise figures to be furnished) ?

A.—**Sri Kadidal MANJAPPA** (Minister for Revenue and Public Works).—

Taluk	*Hobli*		*No. of landless persons.*
Pavagada Taluk—			
1	Kasaba	...	587
2	Nidagal	...	508
3	Hosakote	...	596
4	Nagalmadike	...	655
	Total	...	2,346
Madhugiri Taluk—			
1	Midigesi	...	332
2	Kodigenahalli	...	314
3	Itakadibbanahalli	...	326
	Total	...	972

ಶ್ರೀ ಸಿ. ಟಿ. ಹನುಮಂತಯ್ಯ.—ಪಾವಗಡ ತಾಲ್ಲೂಕು ಮಂಗಳವಾಡ, ನಾಗಲಮಡಕೆ, ನಿಡಗಲ್ಲು ಹೊಸಕೋಟೆ ಮುಂತಾದ ಕಡೆಗಳಿಂದ ನಿಮ್ಮ ವರ್ಗದ ವರ ದರಖಾಸ್ತು ಅರ್ಜಿಗಳು ಬಂದಿಲ್ಲವೆ ?